

ಜೊತೆ ನಿಮ್ಮ ಬುದ್ಧಿ, ಮನಸ್ಸು, ಭಾವನೆಗಳು ಎಲ್ಲವನ್ನೂ ನೀವು ಆರಿಸಿಕೊಳ್ಳುವ ವ್ಯಕ್ತಿಯೊಡನೆ ಹಂಚಿಕೊಳ್ಳುತ್ತೀರಿ. ಹಾಗಾಗಿ ಲೈಂಗಿಕ ಸಂಪರ್ಕವಾದಾಗ ಕೇವಲ ಒಮ್ಮೆ ಸೇರುವ ಕ್ರಿಯೆಗಿಂತ ಹೆಚ್ಚಿನ ಆಕರ್ಷಣೆ ನಿಮಗೆ ಸಹಜವಾಗಿ ಮೂಡಬಹುದು. ಇಂತಹ ಆಕರ್ಷಣೆ ನಿಮ್ಮ ವಿದ್ಯಾಭ್ಯಾಸಕ್ಕೆ ಪೂರಕವಾಗಿರುತ್ತದೆಯೇ? ಸಾಮಾಜಿಕವಾಗಿ ಇದನ್ನು ನೀವು ನಿಭಾಯಿಸುವುದು ಸಾಧ್ಯವೇ? ಆರ್ಥಿಕವಾಗಿ ನಿಮ್ಮನ್ನು ಬೆಂಬಲಿಸುತ್ತಿರುವ ನಿಮ್ಮ ಕುಟುಂಬದವರಿಂದ ಇದನ್ನೆಲ್ಲಾ ಮರೆ ಮಾಚುತ್ತಿರುತ್ತೀರಾ?– ಮುಂತಾದ ವಿಚಾರಗಳ ಬಗೆಗೆ ಯೋಚಿಸಿ. ಎಲ್ಲವನ್ನೂ ಕದ್ದುಮುಚ್ಚಿ ಮಾಡುತ್ತಾ ಹೋಗುವ ಅಗತ್ಯವಿರುವಾಗ ನೀವು ನಿರಂತರ ಆತಂಕ, ಒತ್ತಡಗಳಿಗೆ ಸಿಕ್ಕಿಕೊಳ್ಳುತ್ತೀರಿ ಎನ್ನುವುದನ್ನು ಮರೆಯಬೇಡಿ.

★ ಪಾಶ್ಚಿಮಾತ್ಯ ದೇಶಗಳಲ್ಲಿ ವಿವಾಹಕ್ಕೆ ಮೊದಲಿನ ಲೈಂಗಿಕ ಸಂಪರ್ಕವನ್ನು ಸಹಜವೆಂದು ಒಪ್ಪಿಕೊಳ್ಳಲಾಗುತ್ತದೆ. ನಮ್ಮ ಸಾಮಾಜಿಕ ಸಂದರ್ಭಗಳು ಬೇರೆಯದಾಗಿರುವಾಗ ಅವುಗಳನ್ನು ಮೀರಿ ನಿಲ್ಲುವುದು ನಿಮ್ಮ ಆಯ್ಕೆಯ ವಿಚಾರ. ಆದರೆ ನೀವು ಆರಿಸಿಕೊಂಡ ಮಾರ್ಗದ ಜವಾಬ್ದಾರಿಯನ್ನು ಹೊರುವ ಗಟ್ಟಿತನ ಬೆಳೆಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಪೋಷಕರನ್ನು ಸಮಾಜವನ್ನು ಸಂಪ್ರದಾಯವನ್ನು ಬೈಯುವ ದುರಂತ ನಾಯಕರು ಮಾತ್ರ ಆಗಿ ಉಳಿಯುತ್ತೀರಿ.

★ ತಜ್ಞರ ಮೂಲಕ ಅಥವಾ ಅಂತರ್ಜಾಲದಿಂದ ಲೈಂಗಿಕ ರೋಗಗಳು, ಗರ್ಭನಿರೋಧಕಗಳ ವೈಜ್ಞಾನಿಕ ಮಾಹಿತಿ ಪಡೆದುಕೊಳ್ಳಿ. ಗರ್ಭನಿರೋಧಕಗಳನ್ನು ವೈದ್ಯರ ಸಹಾಯವಿಲ್ಲದೆ ಸೇವಿಸುವುದು ಅಪಾಯಕಾರಿ ಆಗಬಹುದು ಎನ್ನುವ ಎಚ್ಚರವಿರಲಿ.

## ಆಕರ್ಷಣೆ ಮತ್ತು ಪ್ರೀತಿ

ಲೈಂಗಿಕ ಸಂಪರ್ಕವಿಲ್ಲದ ಪ್ರೀತಿ ಪ್ರೇಮಗಳ ಸೆಳೆತವೂ ಪಕೃತಿ ಸಹಜವಾದರೂ ನಿಮ್ಮ ವಿದ್ಯಾಭ್ಯಾಸ ಮತ್ತು ಇತರ ದೂರಗಾಮಿ ಗುರಿಗಳಿಗೆ ಇದು ಅಡ್ಡಿಯಾಗದಂತೆ ನಿಭಾಯಿಸುವುದನ್ನು ಕಲಿಯಬೇಕು. ಪ್ರೀತಿ, ಪ್ರೇಮಗಳೆಲ್ಲಾ ಗೊತ್ತಿಲ್ಲದಂತೆಯೇ ಆಗಿಬಿಡುತ್ತವೆ ಎಂದು ಸಿನಿಮಾ ನಿರ್ದೇಶಕರು ನಿಮಗೆ ದಾರಿ ತಪ್ಪಿಸುತ್ತಾರೆ. ಗೊತ್ತಿಲ್ಲದೇ ಮೂಡುವುದು ನಿಮ್ಮ ವಯಸ್ಸಿಗೆ ಸಹಜವಾದ ಆಕರ್ಷಣೆ. ಇಂತಹ ಆಕರ್ಷಣೆ ಪವಿತ್ರವಾದದ್ದಲ್ಲ, ಕೇವಲ ಕೆಲವೇ ಕ್ಷಣಗಳದ್ದು ಎಂದು ಹಿರಿಯರು ನಿಮಗೆ ಉಪದೇಶ ನೀಡಬಹುದು.

ಆದರೆ ಇದು ಪ್ರಕೃತಿ ಮಾನವ ಕುಲವನ್ನು ಮುಂದುವರೆಸುವ ದೃಷ್ಟಿಯಿಂದ ಮೂಡಿಸುವ ಆಕರ್ಷಣೆ. ಹಾಗಾಗಿ ಇದರಲ್ಲಿ ನಾಚಿಕೆ ಪಟ್ಟುಕೊಳ್ಳುವ ಅಥವಾ ಕೀಳಾಗಿರುವ ಅಂಶಗಳೇನಿಲ್ಲ. ಎಲ್ಲಾ ಕಾಲದಲ್ಲಿ ಎಲ್ಲಾ ಮಾನವರು ಇಂತಹ ಆಕರ್ಷಣೆಗಳಿಗೆ ಒಳಗಾಗಿದ್ದರು. ಶಿಲಾಯುಗದಲ್ಲಿ ಕೇವಲ ಇಂತಹ ಆಕರ್ಷಣೆಗಳು ಮಾನವ ಕುಲವನ್ನು ಮುಂದುವರೆಸಲು ಸಾಕಾಗುತ್ತಿತ್ತೇನೋ. ಆದರೆ ನಾವು ನಿರ್ಮಿಸಿಕೊಂಡಿರುವ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹದಂತಹ ದೀರ್ಘಕಾಲದ ಸಂಬಂಧ ಆಕರ್ಷಣೆಯೊಂದರ ಮೇಲೆ ನಿಲ್ಲುವುದಿಲ್ಲ. ಈ ಆಕರ್ಷಣೆಯನ್ನು ಬಹಳ ಕಾಲ ಸ್ಥಿರವಾಗಿ ನಿಲ್ಲುವ ಪ್ರೀತಿಯಾಗಿ ಪರಿವರ್ತನೆ ಮಾಡಲು ನಿಮಗೆ ಸಮಯದ ಅಗತ್ಯವಿದೆ. ಹಾಗಾಗಿ ನಿಮಗೆ ಆಕರ್ಷಕ ಎನ್ನಿಸಿದ ವ್ಯಕ್ತಿಯೊಡನೆ ಹೆಚ್ಚು ಸಮಯ ಒಡನಾಡಿದ ಮೇಲೆ ಮದುವೆಯಂತಹ ಬದ್ಧ ಸಂಬಂಧದ ಬಗೆಗೆ ನಿಮಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಆಗಷ್ಟೇ ಕಾಲೇಜಿಗೆ ಹೊಸದಾಗಿ ಸೇರಿರುವ ಹುಡುಗಿಯನ್ನು, 'ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ, ಜೀವಮಾನವೆಲ್ಲಾ ನಿನ್ನ ಜೊತೆ ಕಳೆಯಲು ಬಯಸುತ್ತೇನೆ' ಎಂದು ಹೇಳುವುದು ನಮ್ಮ ಸಿನಿಮಾ ಹೀರೋಗಳಿಗೆ ಮಾತ್ರ ಸಾಧ್ಯವಾಗುತ್ತದೆ. ಇತ್ತೀಚಿನ ಕನ್ನಡ ಸಿನಿಮಾದ ಹಾಡೊಂದನ್ನು ನೋಡಿ: 'ನಿನ್ನ ಮನೆವರೆಗೂ ಜೊತೆಯಲಿ ನಾನು ಬರಬಹುದೇ? ನನ್ನ ಕೊನೆವರೆಗೂ ಮನದಲಿ ನಾನು ಇರಬಹುದೇ?' ಎಂದಿದೆ ಆ ಹಾಡಿನ ಸಾಲುಗಳು! ಹತ್ತಾರು ವರ್ಷ ದಾಂಪತ್ಯವನ್ನು ನಡೆಸಿದವರಿಗೂ ಇಂತಹ ಪ್ರಶ್ನೆಗೆ ಉತ್ತರಿಸುವುದು ಕಷ್ಟ! ಇದನ್ನು ಬರೆದವರು ಕನ್ನಡದ ಪ್ರಬುದ್ಧ ಸಾಹಿತಿ ಜಯಂತ ಕಾಯ್ಕಿಣಿಯವರು.